4ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ ಬೆಂಗಳೂರು

ಸಿ.ಸಿ ನಂ- 29037/2018 ಚಾ.ಸಾ.-1 ಅ.ಸಾ.-1

ಪ್ರ.ವ.ಬೊ. ದಿಃ 07.11.2019

ಸಾಕ್ಷಿದಾರನ ಹೆಸರು : ಸುಧಾಕರ್.ಜಿ

ತಂದೆಯ ಹೆಸರು : ಗುಂಡೂರಾವ್

ವಯಸ್ಸು : 40 ವರ್ಷ

ಕೆಲಸ : Woodland, Regional manager.

ವಾಸ : ಕೆಂಗೇರಿ, ಬೆಂಗಳೂರು

ಮುಖ್ಯ ವಿಚಾರಣೆ ಹಿ.ಸಾ.ಸ.ಅ ರವರಿಂದಃ

ನಾನು ವುಡ್‌ಲ್ಯಾಂಡ್ಸ್ ಕಂಪನಿಯಲ್ಲಿ ಸುಮಾರು 15 ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ. ಈ ದೂರು ನೀಡುವ ಸಮಯದಲ್ಲಿ ನಾನು regional manager ಆಗಿದ್ದೆ. ನಮ್ಮ ಪ್ರಧಾನ ಕಛೇರಿ ನ್ಯೂ ಡೆಲ್ಲಿಯಲ್ಲಿದ್ದು, ಬೆಂಗಳೂರಿನಲ್ಲಿ ಕಮರ್ಷಿಯಲ್ ಸ್ಟ್ರೀಟ್‌ನಲ್ಲಿ ಬೆಂಗಳೂರಿಗೆ ಸಂಬಂಧಿಸಿ ಕಂಟ್ರೋಲಿಂಗ್ ಯುನಿಟ್ ಆಗಿ ಕಛೇರಿ ನಡೆಸುತ್ತಿದ್ದು, ಅಲ್ಲಿ ನಾನು regional manager ಆಗಿ report ಮಾಡಿಕೊಂಡಿದ್ದೆ. ನಮ್ಮ ಕಂಪನಿ footwear and apparels showroom ಆಗಿರುತ್ತದೆ. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಬಸವೇಶ್ವರನಗರದ ಬ್ರಾಂಚ್ ಇದ್ದು, ಅದರಲ್ಲಿ ಒಂದನೇ ಆರೋಪಿ ಸ್ಟೋರ್ incharge ಆಗಿದ್ದರು. ಬಸವೇಶ್ವರನಗರ ಬ್ರಾಂಚ್‌ನಲ್ಲಿ ಮೇ 2017 ರಲ್ಲಿ ಒಂದನೇ ಆರೋಪಿಗೆ store incharge ಆಗಿ ಚಾರ್ಜ್ ಕೊಟ್ಟಿದ್ದೆವು. Store incharge ಆಗಿ ಆರೋಪಿ ಸದರಿ ಸ್ಟೋರ್‌ನ ಸಂಪೂರ್ಣ ಜವಾಬ್ದಾರಿ ಎಂದರೆ ಸ್ಟಾಕ್, ಲೆಕ್ಕಪತ್ರಗಳನ್ನು ಸಲ್ಲಿಸುವುದು, ಕ್ಯಾಶ್, ಗ್ರಾಹಕರ ಸರ್ವಿಸ್‌ನ ಸಂಪೂರ್ಣ ಜವಾಬ್ದಾರಿ ವಹಿಸಲಾಗಿತ್ತು.

2ನೇ ಆರೋಪಿ ಸದರಿ ಸ್ಟೋರ್‌ನಲ್ಲಿ sales man ಆಗಿ 2015 ರಿಂದ ಕೆಲಸ ಮಾಡುತ್ತಿದ್ದು, ಸದರಿ ಸಾಮಾಗ್ರಿಗಳ ಬಗ್ಗೆ ವಿವರಣೆ ಕೊಡುವುದು, ಬೆಲೆ ನಿಗದಿ ಮಾಡುವುದು, ಬಿಲ್ಲಿಂಗ್ ಮಾಡಿ ಒಂದನೇ ಆರೋಪಿಗೆ ತಿಳಿಸುವುದು ಅವರ ಜವಾಬ್ದಾರಿಯಾಗಿತ್ತು.

ದಿಃ 07.11.2017 ರಂದು ನಮ್ಮ ಕಂಪನಿಯಿಂದ ಕ್ರೆಡಿಟ್ ಕಾರ್ಡ್ sale ನಲ್ಲಿ ವ್ಯತ್ಯಾಸ ಬಸವೇಶ್ವರನಗರ ಬ್ರಾಂಚ್‌ನಲ್ಲಿ ಆಗಿದೆ ಎಂದು ಮಾಹಿತಿ ಬಂದಿದೆ ಎಂದು, credit card sales ನಲ್ಲಿ ತಪ್ಪು ಲೆಕ್ಕ ಕೊಟ್ಟಿದ್ದು, ಅದನ್ನು ಪರಿಶೀಲಿಸಲು ಹೇಳಿದ್ದು, ಅದರಂತೆ ಆಗಸ್ಟ್ 2017 ರಿಂದ ದಿಃ 24.11.2017 ರವರೆಗೆ ನಾವು credit card sales ಲೆಕ್ಕಗಳನ್ನು ಪರಿಶೀಲಿಸಿದ್ದು, ಅದರಲ್ಲಿ ರೂ.1,04,790/- ವ್ಯತ್ಯಾಸ ಕಂಡುಬಂದಿದ್ದು, ನಂತರ ಆಡಿಟ್ ಮಾಡಿದಾಗ ಸ್ಟಾಕ್‌ನಲ್ಲಿ ರೂ.1,87,494/- stock shortage ಇದೆ ಎಂದು ವರದಿ ಕೊಟ್ಟಿದ್ದು, ಇದರ ಬಗ್ಗೆ ಆರೋಪಿತರನ್ನು ನಾವು ವಿಚಾರಿಸಿದ್ದು, ಅವರು ಆ ಬಗ್ಗೆ ಒಪ್ಪಿಕೊಂಡಿದ್ದು ಅದು ಅವರಿಂದಲೇ ಆಗಿದ್ದು, ಸ್ವಂತಕ್ಕೆ ಉಪಯೋಗಿಸಿದ್ದು ಅದನ್ನು ಹಿಂತಿರುಗಿಸುವುದಾಗಿ ಹೇಳಿದ್ದರು. ಕೊಡುತ್ತೇನೆ ಎಂದು ಹೇಳಿದ್ದು ನಂತರ ದುಡ್ಡು ಇಲ್ಲ ಎಂದು ಹೇಳಿದ್ದು, ಕಾರಣ ನಾವು ದಿಃ 02.12.2017 ರಂದು ಪೊಲೀಸ್ ಠಾಣೆಯಲ್ಲಿ ದೂರು ಕೊಟ್ಟಿದ್ದೇನೆ. ದೂರನ್ನು ನಿ.ಪಿ.1 ಹಾಗೂ ಸಾಕ್ಷಿಯ ಸಹಿಯನ್ನು ನಿ.ಪಿ.1(ಎ) ಎಂದು ಗುರುತಿಸಲಾಯಿತು. ನಂತರ ಪೊಲೀಸರು ಕೃತ್ಯ ನಡೆದ ಸ್ಥಳಕ್ಕೆ ಬಂದು ಸಾಕ್ಷಿದಾರರ ಹಾಗೂ ನನ್ನ ಸಮಕ್ಷಮ ಮಹಜರ್ ಕ್ರಮ ಜರುಗಿಸಿದ್ದು, ಮಹಜರ್‌ನ್ನು ನಿ,ಪಿ.2 ಹಾಗೂ ಸಾಕ್ಷಿಯ ಸಹಿಯನ್ನು ನಿ.ಪಿ.2(ಎ) ಎಂದು ಗುರುತಿಸಲಾಯಿತು.

ಈ ಹಂತದಲ್ಲಿ ಮುಂದುವರೆದ ಮುಖ್ಯವಿಚಾರಣೆಯನ್ನು ಮುಂದೂಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. ಸಾಕ್ಷಿಯ ಎದುರಿನಲ್ಲಿ ಓದಿ ಹೇಳಿದ ಮೇಲೆ ಸರಿ ಇದೆ ಎಂದು ಒಪ್ಪಿ ಸಹಿ ಮಾಡಲಾಗಿದೆ.)

ಓ ಹೇ ಕೇ ಸ ಇ ಒ

4ನೇ ಅ ಮು ಮ ದಂ, ಬೆಂಗಳೂರು

ಸಾಕ್ಷಿಯನ್ನು ಈ ದಿನಾಂಕಃ 03.01.2020 ರಂದು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.
ಮುಂದುವರಿದ ಮುಖ್ಯ ವಿಚಾರಣೆ ಹಿ.ಸ.ಸ.ಅ ರವರಿಂದಃ

ನಂತರ ದೂರಿನೊಂದಿಗೆ ಒಂದನೇ ಆರೋಪಿ ಸದರಿ ಪ್ರಶ್ನಿತ ಬಸವೇಶ್ವರನಗರ ಶೋರೂಂಗೆ ವರ್ಗಾವಣೆಗೊಂಡಾಗ ಆತನಿಗೆ ಸದರಿ ಅಂಗಡಿಯ ಸ್ಟಾಕ್‌ನ್ನು ಅವರೇ ಚೆಕ್ ಮಾಡಿದ್ದು, ಅದಕ್ಕೆ ಸಂಬಂಧಪಟ್ಟಂತೆ protocol ನ್ನು ನೀಡಿರುತ್ತೇನೆ. ಸದರಿ ದಾಖಲೆಯನ್ನು ನಿ.ಪಿ.3 (5 ಹಾಳೆಗಳು) ಎಂದು ಗುರುತಿಸಲಾಯಿತು. ಸಾಕ್ಷಿಯ ನಿ.ಪಿ.3 ರ ಕೊನೆ ಪುಟದಲ್ಲಿರುವ ಸಹಿ ಗುರುತಿಸಿದ್ದು ನಿ.ಪಿ.3(ಎ) ಎಂದು ಗುರುತಿಸಲಾಯಿತು. ಆಗಸ್ಟ್ ತಿಂಗಳ Daily mirror statement ನ್ನು ನಿ.ಪಿ.4 ಮತ್ತು 5 ಎಂದು ಗುರುತಿಸಲಾಯಿತು. ಆಗಸ್ಟ್ 2017 ರ Credit card settlement copy ಗಳನ್ನು ನಿ.ಪಿ.6 (5 ಹಾಳೆಗಳು) ಎಂದು ಗುರುತಿಸಲಾಯಿತು. ಸೆಪ್ಟಂಬರ್ 2017 ರ Daily mirror statement ನ್ನು ನಿ.ಪಿ.7 ಮತ್ತು 8 ಎಂದು ಗುರುತಿಸಲಾಯಿತು. ಸೆಪ್ಟಂಬರ್ 2017 ರ Credit card charge slip ಗಳನ್ನು ನಿ.ಪಿ.9 (7 ಹಾಳೆಗಳು) ಎಂದು ಗುರುತಿಸಲಾಯಿತು. ಅಕ್ಟೋಬರ್ ತಿಂಗಳ Daily mirror statement ನ್ನು ನಿ.ಪಿ.10 ಮತ್ತು 11 ಎಂದು ಗುರುತಿಸಲಾಯಿತು. ಅಕ್ಟೋಬರ್ 2017 ರ Credit card charge slip ಗಳನ್ನು ನಿ.ಪಿ.12 (6 ಹಾಳೆಗಳು) ಎಂದು ಗುರುತಿಸಲಾಯಿತು. ನವೆಂಬರ್ 2017 ರ Daily mirror statement ನ್ನು ನಿ.ಪಿ.13 ಮತ್ತು 14 ಎಂದು ಗುರುತಿಸಲಾಯಿತು. ನವೆಂಬರ್ 2017 ರ Credit card charge slip ಗಳನ್ನು ನಿ.ಪಿ.15 (5 ಹಾಳೆಗಳು) ಎಂದು ಗುರುತಿಸಲಾಯಿತು.

ಜಿ.ಶ್ರೀನಿವಾಸನ್ ಅಂಡ್ ಅಸೋಸಿಯೇಷನ್ ರವರು ನೀಡಿರುವ ಆಡಿಟರ್ ವರದಿ ಹಾಗೂ ಅದಕ್ಕೆ ಸಂಬಂಧಪಟ್ಟ ವಿವರವಾದ ಸ್ಟೇಟ್‌ಮೆಂಟ್‌ನ ಅಸಲು ಪ್ರತಿಯನ್ನು ನಿ.ಪಿ.16 (9 ಹಾಳೆಗಳು) ಎಂದು ಗುರುತಿಸಲಾಯಿತು. ಒಂದನೇ ಆರೋಪಿಯ ಪ್ರಮೋಷನ್ ವರದಿಯನ್ನು ನಿ.ಪಿ.17 ಎಂದು ಗುರುತಿಸಲಾಯಿತು. ಒಂದನೇಆರೋಪಿ ಕೆಂಗೇರಿ ಬ್ರಾಂಚ್‌ನಿಂದ ಬಸವೇಶ್ವರನಗರ ಬ್ರಾಂಚ್‌ಗೆ

ವರ್ಗಾವಣೆಗೊಂಡಿರುವ ಆದೇಶ ಪತ್ರವನ್ನು ನಿ.ಪಿ.18 ಎಂದು ಗುರುತಿಸಲಾಯಿತು. ಎರಡನೇ ಆರೋಪಿಯ appointment letter ನ್ನು ನಿಪಿ.19 (4 ಹಾಳೆಗಳು) ಎಂದು ಗುರುತಿಸಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನೋಡಿ ಗುರುತಿಸಿದ್ದಾರೆ. ಆರೋಪಿತರು ಬಸವೇಶ್ವರನಗರದ Woodland showroom ನಲ್ಲಿ ಕೆಲಸಕ್ಕೆ ಸೇರಿಕೊಂಡು ಅವರಿಗೆ ವಹಿಸಿದ ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಿಸದೇ, ಹಣ ಹಾಗೂ ಸ್ಟಾಕ್‌ನ್ನು ವ್ಯತ್ಯಾಸಗೊಳಿಸಿ ನಂಬಿಕೆದ್ರೋಹ ಮಾಡಿ ಸುಮಾರು ರೂ.2,92,000/- ಮೋಸ ಮಾಡಿದ್ದಾರೆ.

ಪಾಟೀ ಸವಾಲುಃ ಆರೋಪಿತರ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. ಸಾಕ್ಷಿಯ ಎದುರಿನಲ್ಲಿ 'ಓದಿ ಹೇಳಿದ ಮೇಲೆ ಸರಿ ಇದೆ ಎಂದು ಒಪ್ಪಿ ಸಹಿ ಮಾಡಲಾಗಿದೆ.)

ಓ ಹೇ ಕೇ ಸ ಇ ಒ

4ನೇ ಅ ಮು ಮ ದಂ, ಬೆಂಗಳೂರು

ಸಾಕ್ಷಿಯನ್ನು ಈ ದಿನಾಂಕಃ 03.01.2020 ರಂದು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.
ಪಾಟೀ ಸವಾಲು ಶ್ರೀ ಹೆಚ್.ಸಿ.ಎಸ್ ವಕೀಲರಿಂದ ಆರೋಪಿತರ ಪರವಾಗಿಃ

ನಾನು Aero Club Footwear and apparels shop ನಲ್ಲಿ ಕೆಲಸ ಮಾಡುತ್ತಿದ್ದೇನೆ ಎಂದು ತೋರಿಸಲು ಯಾವುದೇ ಹಾಜರು ಮಾಡಿಲ್ಲ. ನಾನು ಕೆಲಸ ಮಾಡುತ್ತಿದ್ದೇನೆ ಎಂದು ದಾಖಲೆ ಹಾಜರು ಮಾಡಲು ತೊಂದರೆ ಇಲ್ಲ. ಒಂದನೇ ಆರೋಪಿ ಸುಮಾರು 8 ವರ್ಷ, 2ನೇ ಆರೋಪಿ ಸುಮಾರು 2 ವರ್ಷ ನಮ್ಮ ಸಂಸ್ಥೆಯಲ್ಲಿ ಕೆಲಸ ಮಾಡಿದ್ದಾರೆ. 1ನೇ ಆರೋಪಿ ಮಲ್ಲೇಶ್ವರಂನಲ್ಲಿ,ಕೆಂಗೇರಿ ಮತ್ತು ಬಸವೇಶ್ವರನಗರದಲ್ಲಿ incharge ಆಗಿ ಕೆಲಸ ಮಾಡಿದ್ದು, ಮೊದಲು ಅವರು ಸೇಲ್ಸ್‌ಮನ್ ಆಗಿದ್ದರು. ನಂತರ ಪ್ರೊಮೇಷನ್ ಆಗಿ incharge ಆಗಿದ್ದರು. 1ನೇ ಆರೋಪಿ ಒಳ್ಳೆಯ ಕೆಲಸಗಾರ ಎಂದರೆ ಸರಿ.

ನಮ್ಮ ಕಂಪನಿಯ ಆಡಿಟ್‌ನ್ನು ಶ್ರೀನಿವಾಸನ್, Chartered Accountant ಹತ್ತಿರ ಮಾಡಿಸಿದ್ದೆವು. ಜಿ.ಶ್ರೀನಿವಾಸ್ ಅಂಡ್ ಅಸೋಸಿಯೇಟ್ಸ್ ಅವರಿಂದಲೇ ಮಾಡಿಸಿದ್ದೇವೆ. ಜಿ.ಶ್ರೀನಿವಾಸ್ ಅವರ ಸಿಬ್ಬಂದಿಯವರು ನಮ್ಮ ಶಾಖೆಗಳಿಗೆ ಬಂದು ದಾಖಲೆಗಳನ್ನು ಪರಿಶೀಲಿಸಿದ್ದಾರೆ. ಅವರ ಹೆಸರುಗಳು ಗೊತ್ತಿಲ್ಲ. ಬಸವೇಶ್ವರ ಶಾಖೆಗೆ ಯಾರೂ ಆಡಿಟರ್ ಬಂದಿಲ್ಲ ಹಾಗೂ ಪರಿಶೀಲನೆ ಮಾಡಿಲ್ಲ ಎಂದರೆ ಸರಿಯಲ್ಲ. ಆಡಿಟರ್‌ರವರು ಕಛೇರಿಗೆ ಬಂದು ಪರಿಶೀಲನೆ ಮಾಡಿದ ಬಗ್ಗೆ ದಾಖಲೆ ಹಾಜರು ಮಾಡಿಲ್ಲ. ಜಿ.ಶ್ರೀನಿವಾಸ್‌ರವರು ನವಾಜ್ ಪಾಷಾರವರಿಂದ ವಿವರಣೆಗಳನ್ನು ಪಡೆದು ಆಡಿಟ್ ವರದಿ ಸಲ್ಲಿಸಿದ್ದೇನೆ ಎಂದು ನಮೂದಿಸಿದ್ದಾರೆ ಎಂದರೆ ಸರಿ. ಜಿ.ಶ್ರೀನಿವಾಸ್‌ರವರು ಯಾವುದೇ ಪರಿಶೀಲನೆ ಮಾಡದೇ ವರದಿ ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ.

ಕಂಪನಿಯಲ್ಲಿ ನಾನು ರೀಜನಲ್ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದ್ದೇನೆ. ದೆಹಲಿಯಲ್ಲಿರುವ ಕಂಪನಿಯ ಪ್ರಧಾನ ಕಛೇರಿಯಿಂದ ನಮಗೆ ಕ್ರೆಡಿಟ್ ಕಾರ್ಡ್‌ನಿಂದ misuse

ಆಗಿದೆ ಎಂದು ಮಾಹಿತಿ ಬಂದಿತ್ತು. ನನಗೆ ಲೋಕಲ್ ರೀಜನಲ್ ಮ್ಯಾನೇಜರ್ ಆಗಿ ಮಾಹಿತಿ ಇರಲಿಲ್ಲ.

1ನೇ ಆರೋಪಿಗೆ ರೂ.15,000/- ಸಂಬಳ ಹಾಗೂ sales incentives ಇದ್ದು, 2ನೇ ಆರೋಪಿಗೂ ಸಹ ರೂ.14-15,000/- ಇತ್ತು. 2ನೇ ಆರೋಪಿಗೆ basic ರೂ.6,000/- ಇದ್ದು incentive ಸೇರಿ ರೂ.14,000/- ಆಗುತ್ತದೆ. ಆರೋಪಿತರು ಜಾಸ್ತಿ ಸಂಬಳ ಕೇಳಿದ್ದು, ಕಂಪನಿಯವರು ಒಪ್ಪಿರಲಿಲ್ಲ ಎಂದರೆ ಸರಿಯಲ್ಲ. ಜಾಸ್ತಿ ಸಂಬಳ ಕೊಡಬೇಕಾಗುತ್ತದೆ ಎಂಬ ಕಾರಣಕ್ಕೆ ಆರೋಪಿತರನ್ನು ಕೆಲಸದಿಂದ ತೆಗೆಯುವ ಉದ್ದೇಶದಿಂದ ಸುಳ್ಳು ದೂರು ಕೊಟ್ಟಿದ್ದೇವೆ ಎಂದರೆ ಸರಿಯಲ್ಲ. ನನ್ನ ಕಡೆಯಿಂದ 2 ಹಾಗೂ ಇನ್ನೊಬ್ಬ ಏರಿಯಾ ಮ್ಯಾನೇಜರ್‌ರವರು ಇನ್ನೊಂದು ಪ್ರಕರಣ ಬೇರೆ ಬೇರೆ ಸಿಬ್ಬಂದಿಯವರ ಮೇಲೆ ಈ ಕೇಸು ಸೇರಿ ಒಟ್ಟು 3 ಪ್ರಕರಣಗಳು ದಾಖಲಾಗಿವೆ. ಮ್ಯಾನೇಜರ್‌ರವರು ತಿಂಗಳಿಗೆ ಒಮ್ಮೆ head office ಗೆ ಸೇಲ್ಸ್ ಮತ್ತು ಸ್ಟಾಕ್ ಅಕೌಂಟ್ details ಕಳುಹಿಸುತ್ತಾರೆ. ಪ್ರತಿ ತಿಂಗಳು ಕಳುಹಿಸುತ್ತಿದ್ದರಿಂದ ಇಷ್ಟು ಹಣ ದುರುಪಯೋಗವಾಗುವ ಸಾಧ್ಯತೆ ಇಲ್ಲ ಎಂದರೆ ಸರಿಯಲ್ಲ. ಎಲ್ಲಾ ವರದಿಗಳನ್ನು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ.

ಕ್ರೆಡಿಟ್ ಕಾರ್ಡ್‌ನಲ್ಲಿ ಸೇಲ್ ಮಾಡಿದರೆ ಹಣ ಬ್ಯಾಂಕಿಗೆ ಹೋಗುತ್ತದೆ. ಕಾರ್ಡ್‌ನಲ್ಲಿ ಶೋರೂಂನಲ್ಲಿ swipe ಮಾಡಿದರೆ ಕಂಪನಿ ಖಾತೆಗೆ ಹಣ ಹೋಗುತ್ತದೆ. ಆರೋಪಿತರು ತಪ್ಪು ಲೆಕ್ಕ ತೋರಿಸಿದ್ದರಿಂದ ಅಷ್ಟು ಹಣ ದುರುಪಯೋಗವಾಗಿದೆ. ಈ ರೀತಿ ದುರುಪಯೋಗವಾಗಿದೆ ಎಂದು ನವೆಂಬರ್ 2017 ರಲ್ಲಿ ಗೊತ್ತಾಯಿತು. 28.11.2017 ಗೆ ದೂರು ಕೊಟ್ಟಿದ್ದು, ದಿಃ 02.12.2017 ಗೆ ಪ್ರ.ವ.ವರದಿ ದಾಖಲಾಗಿತ್ತು. ಪ್ರಥಮವಾಗಿ ದಿಃ 28.11.2017 ರಂದು ಕೊಟ್ಟಿದ್ದು, ನಂತರ ದಿಃ 02.12.2017 ಕ್ಕೆಇನ್ನೊಂದು ದೂರು ಕೊಟ್ಟಿದ್ದೇವೆ. ಪೊಲೀಸ್ ಠಾಣೆಯಲ್ಲಿ ರಾಜಿ ಮಾಡಲು ಒತ್ತಾಯ ಹಾಕಿದ್ದರಿಂದ ಅದಕ್ಕೆ ನಮ್ಮ ಕಂಪನಿ ಒಪ್ಪದೇ ಇದ್ದು, ಸುಳ್ಳು ದೂರು

ದಾಖಲಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಆಡಿಟ್ ವರದಿ ಬಂದ ಕೂಡಲೇ ದೂರು ಕೊಡಲು ತೊಂದರೆ ಇತ್ತು, ಆ ದಿನ ಸಾಯಂಕಾಲ ಆಗಿದ್ದು, ಮರುದಿನ ಕೊಟ್ಟಿದ್ದೇವೆ. ಪೊಲೀಸರು ಬಂದು ಸ್ಥಳ ಪಂಚನಾಮೆ ಮಾಡಿದ್ದು ಗೊತ್ತಿದೆ. ಪಂಚನಾಮೆ ಸ್ಥಳದಲ್ಲಿ ತಯಾರಿಸಿದ್ದು, ಸ್ಥಳದಲ್ಲಿ ಸಹಿ ಹಾಕಿದ್ದೇನೆ. ಸ್ಥಳಕ್ಕೆ ಬಂದು ಪೊಲೀಸರು ಯಾವುದೇ ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿತರನ್ನು ಕೆಲಸದಿಂದ ತೆಗೆದಿದ್ದಾರೋ ಇಲ್ಲವೋ ಕಂಪನಿಯಲ್ಲಿ ವಿಚಾರಿಸಬೇಕು, ನನಗೆ ಗೊತ್ತಿಲ್ಲ. ಆರೋಪಿತರನ್ನು ಕೆಲಸದಿಂದ ತೆಗೆದಿಲ್ಲ, ಅವರಿಗೆ gratuity ಮತ್ತು ಹೆಚ್ಚು ಸಂಬಳ ಕೊಡಬೇಕಾಗಿದ್ದರಿಂದ ಸುಳ್ಳು ದೂರು ಕೊಟ್ಟಿದ್ದೇವೆ ಎಂದರೆ ಸರಿಯಲ್ಲ, ಸುಳ್ಳು ಆಡಿಟ್ ವರದಿ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ಕಂಪನಿಯಿಂದ ಶ್ರೀನಿವಾಸ್ ಅವರನ್ನು ಆಡಿಟರ್ ಆಗಿ ನೇಮಕ ಮಾಡಿರುವ ಬಗ್ಗೆ ದಾಖಲೆ ಹಾಜರು ಮಾಡಿಲ್ಲ. ಬಸವೇಶ್ವರ ಶಾಖೆಯಲ್ಲಿ ಯಾವುದೇ ಸ್ಟಾಕ್ ದುರುಪಯೋಗ ಆಗಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ : ಇಲ್ಲ

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. ಸಾಕ್ಷಿಯ ಎದುರಿನಲ್ಲಿ 'ಓದಿ ಹೇಳಿದ ಮೇಲೆ ಸರಿ ಇದೆ ಎಂದು ಒಪ್ಪಿ ಸಹಿ ಮಾಡಲಾಗಿದೆ.)**

ಓ ಹೇ ಕೇ ಸ ಇ ಒ

4ನೇ ಅ ಮು ಮ ದಂ, ಬೆಂಗಳೂರು